**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ– 220/2024**

| | | | |
|---|---|---|---|
| **ಸಾಕ್ಷಿದಾರನ ಹೆಸರು** | : ದಿನೇಶ್ | | **ಪಿ.ಡಬ್ಲ್ಯೂ–** 7 |
| **ತಂದೆಯ ಹೆಸರು** | : ಗಣಪತ್ ಲಾಲ್ | | **ಸಿ.ಡಬ್ಲ್ಯೂ–** 10 |
| **ವಯಸ್ಸು** | : 32 ವರ್ಷ | | |
| **ಉದ್ಯೋಗ** | : ದಿನಸಿ ವ್ಯಾಪಾರ | | |
| **ವಾಸಸ್ಥಳ** | : ಬೆಂಗಳೂರು. | | |

**ಸಾಕ್ಷಿಯನ್ನು ಈ ದಿನ ದಿಃ19.02.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**1.** ನಾನು ಮೂಲತಃ ರಾಜಸ್ಥಾನದ ಜೋದ್ ಪುರ ಜಿಲ್ಲೆಯ ಬಿಲ್ಲಡ ತಾಲ್ಲೂಕಿನವರಾಗಿರುತ್ತಾನೆ. ನಮ್ಮ ತಂದೆ–ತಾಯಿಗೆ ನಾವು ಐದು ಜನ ಮಕ್ಕಳಿದ್ದು, 3 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳಿದ್ದು, ಗಂಡು ಮಕ್ಕಳು ನಾನು ಮತ್ತು ನನ್ನ ತಮ್ಮ ಸುನಿಲ್ ಇರುತ್ತೇವೆ. ನನಗೆ ಮದುವೆಯಾಗಿ ಈಗ ಇಬ್ಬರು ಮಕ್ಕಳಿರುತ್ತಾರೆ.

**2.** ನಾನು ಮತ್ತು ನನ್ನ ತಮ್ಮ ಬೆಂಗಳೂರಿಗೆ ಬಂದು ಈಗ 17 ವರ್ಷಗಳು ಕಳೆದಿರುತ್ತವೆ. ನಾವು ಬೆಂಗಳೂರಿನ ಮಾಚಹಳ್ಳಿ ಗೇಟ್ ಬಳಿ ವಾಸವಿದ್ದೆವು. ನಾವು ಅಲ್ಲಿ ದಿನಸಿ ಅಂಗಡಿ ಇಟ್ಟುಕೊಂಡಿದ್ದು, ಅದರ ಹೆಸರು ಬಾಲಾಜಿ ಫ್ರಾವಿಜನ್ ಸ್ಟೋರ್ ಆಗಿರುತ್ತದೆ.

**3.** ಆರೋಪಿ ಮಹೇಂದ್ರ ಚೌದರಿ ನನಗೆ ಪರಿಚಯ ಆಗಿರುತ್ತಾರೆ. ಅವರು ನಮ್ಮ ಅಂಗಡಿಗೆ ದಿನಸಿ ತೆಗೆದುಕೊಳ್ಳಲು ಬಂದಾಗ ಪರಿಚಯ ಆಗಿರುತ್ತಾರೆ. ಅವರು ನಮ್ಮ ಊರಿನ ಪಕ್ಕದವರಾದ್ದರಿಂದ ಪರಿಚಯಸ್ಥರಾಗಿರುತ್ತಾರೆ. ಅವರು ಮೈಸೂರಿನಲ್ಲಿ ಚಿನ್ನದ ಅಂಗಡಿಗೆ ಇದ್ದು, ವ್ಯಾಪಾರದಲ್ಲಿ ನಷ್ಟವಾದ್ದರಿಂದ ಆತ ಬೆಂಗಳೂರಿಗೆ ಬಂದಿರುತ್ತೇನೆಂದು ತಿಳಿಸಿದ್ದನು. ನನಗೆ ಅವರು 2021 ನೇ ಇಸವಿಯಲ್ಲಿ ಪರಿಚಯ ಆಗಿರುತ್ತಾರೆ. ಆತ ನನಗೆ, ತಾನು ಜನರ ಬಳಿಯಿಂದ ಚಿನ್ನವನ್ನು ತೆಗೆದುಕೊಂಡಿದ್ದು, ಸದರಿ ಚಿನ್ನವನ್ನು ವಾಪಸ್ಸು ಕೊಡಲು ಆಗದೇ ಇದುದ್ದರಿಂದ ಜನರು ಆತನ ಮೇಲೆ ಕೇಸು ಮಾಡಿರುತ್ತಾರೆ ಎಂದು ಹೇಳಿಕೊಂಡಿದ್ದನು. ನಂತರ 2 ತಿಂಗಳ ಬಳಿಕ ಮೈಸೂರಿಗೆ ಚಿನ್ನದ ಅಂಗಡಿ ಮಾಡುತ್ತೇನೆ ಎಂದು ಹೊರಟು ಹೋದರು.

**4.** ನನ್ನ ತಮ್ಮ ಸುನಿಲ್ ಮತ್ತು ನನ್ನ ಹೆಂಡತಿಯ ನಡುವೆ ಜಗಳವಾಗಿದ್ದು, ಸದರಿ ವಿಚಾರವನ್ನು ನಾನು ಮಹೇಂದ್ರನಿಗೆ ತಿಳಿಸಿದೆನು. ಆಗ ಆತ ಮೈಸೂರಿನಲ್ಲಿ ಅಂಗಡಿ ಮಾಡಿಕೊಡುತ್ತೇನೆ, ಮೈಸೂರಿಗೆ ಬನ್ನಿ ಎಂದು ನನಗೆ ಕರೆದಿದ್ದನು. ನಂತರ ನಾನು ನನ್ನ ಹೆಂಡತಿಯನ್ನು ಊರಿಗೆ ಕಳುಹಿಸಿ ನಾನು ಮೈಸೂರಿಗೆ ಬಂದಿರುತ್ತೇನೆ. ನಾನು ಮೈಸೂರಿಗೆ ಆಗಸ್ಟ್ –2, 2021 ರಲ್ಲಿ ಬಂದಿರುತ್ತೇನೆ. ನಾನು ರೈಲ್ವೆ ಮೂಲಕ ಮೈಸೂರಿಗೆ ಬಂದಿರುತ್ತೇನೆ. ಮಹೇಂದ್ರ ನನ್ನನ್ನು ರೈಲ್ವೆ ಸ್ಟೇಷನ್ ನಿಂದ ತನ್ನ ಟಿ.ವಿ.ಎಸ್ ಗಾಡಿಯಲ್ಲಿ ಕರೆದುಕೊಂಡು ಮಹದೇವಪುರ ರೈಲ್ವೆ ಗೇಟ್ ಬಳಿ ಬಂದನು. ಅಲ್ಲಿ ಬಾಲಾಜಿ ಜ್ಯೂವಲರ್ ಎಂದು ಅಂಗಡಿ ಇತ್ತು. ಅದೇ ದಿನ ರಾತ್ರಿ 9 ಗಂಟೆಯವರೆಗೆ ಅಂಗಡಿಯಲ್ಲಿದ್ದು, ನಂತರ ನನ್ನನ್ನು ಅವರು ವಾಸವಿದ್ದ ಕೋಣೆಗೆ ಕರೆದುಕೊಂಡು ಹೋದರು. ಅಲ್ಲಿ ಮನ್ಸೂರ್

ವಿಜಯ್ ಎಂಬ ಇಬ್ಬರು ವ್ಯಕ್ತಿಗಳಿದ್ದರು. ವಿಜಯ್ ರಾಜಸ್ಥಾನದವನೆಂದು ನನಗೆ ಮಾತನಾಡುವಾಗ ತಿಳಿದು ಬಂದಿರುತ್ತದೆ. ಮಹೇಂದ್ರ ಮತ್ತು ವಿಜಯ್ ಹೊರಗಡೆ ಹೋಗಿ ಮಾತನಾಡಿಕೊಳ್ಳುತ್ತಿದ್ದರು. ನಂತರ 11.30 ಗಂಟೆಗೆ ಮಲಗಿಕೊಂಡೆವು. ನಂತರ ಮನ್ಸೂರ್ ಮತ್ತು ವಿಜಯ್ ಬೆಂಗಳೂರಿಗೆ ಹೋಗುತ್ತೇವೆ ಎಂದು ಬೆಳಿಗ್ಗೆ ಹೊರಟು ಹೋದರು.

**5.** ಆಗಸ್ಟ್–18 ನೇ ತಾರೀಖಿನಂದು ಮಹೇಂದ್ರ ನನಗೆ ವಿಜಯನಿಗೆ 4,000 ರೂ. ಫೋನ್ ಪೇ ಮಾಡು ಎಂದು ಕೇಳಿಕೊಂಡನು. ಆಗ ಸಮಯ ಸಂಜೆ 5 ಗಂಟೆ ಆಗಿರಬಹುದು. ಆಗ ನನ್ನ ಖಾತೆಯಲ್ಲಿ ಹಣ ಇರಲಿಲ್ಲ. ಆಗ ಮಹೇಂದ್ರ ನನಗೆ 4,000 ರೂ. ನಗದು ಹಣ ನೀಡಿರುತ್ತಾನೆ. ನಾನು ಪಕ್ಕದ ಅಂಗಡಿಗೆ ಹೋಗಿ 4,000 ರೂ.ನ್ನು ಅಂಗಡಿಯವನಿಗೆ ಕೊಟ್ಟು ನನ್ನ ಅಕೌಂಟಿಗೆ 4,000 ರೂ. ಹಾಕಿಸಿಕೊಂಡು, ನಂತರ ಸದರಿ ಹಣವನ್ನು ವಿಜಯನಿಗೆ ಫೋನ್ ಪೇ ಮಾಡಿರುತ್ತೇನೆ. ಆಗ ನನ್ನ ಮೊಬೈಲ್ ಸಂಖ್ಯೆ– 9986943953 ಆಗಿತ್ತು. ಮಹೇಂದ್ರನೇ ವಿಜಯನ ಫೋನ್ ನಂಬರ್ ಕೊಟ್ಟು ಫೋನ್ ಪೇ ಮಾಡಲು ಹೇಳಿದ್ದನು.

**6.** ನಂತರ 22 ನೇ ತಾರೀಖಿನಂದು ರಾಖಿ ಹಬ್ಬವಿದ್ದು, ನಾನು ಮತ್ತು ಮಹೇಂದ್ರಚೌದರಿ ಮೈಸೂರಿನಿಂದ ಬೆಂಗಳೂರಿನಲ್ಲಿರುವ ನನ್ನ ತಂಗಿ ಸುಮನ್ ರವರ ಮನೆಗೆ ಹೋಗಿರುತ್ತೇವೆ. ಅಲ್ಲಿ ಊಟ ಮಾಡಿಕೊಂಡು ಸಾಯಂಕಾಲ ವಾಪಸ್ಸು ಮೈಸೂರಿಗೆ ಬಂದಿರುತ್ತೇವೆ.

**7.** ನಂತರ ಮಾರನೇ ದಿನ ವಿದ್ಯಾರಣ್ಯಂಪುರಂನಲ್ಲಿ ಚಿನ್ನದ ಅಂಗಡಿ ದರೋಡೆ ಆದ ಬಗ್ಗೆ ತಿಳಿದಿರುತ್ತದೆ. ಮಹೇಂದ್ರನು ಪೋನಿನಲ್ಲಿ ಮಾತನಾಡುತ್ತಿದ್ದಾಗ ಸದರಿ ವಿಚಾರ ತಿಳಿದು ಬಂದಿರುತ್ತದೆ. ಆಗ ಸಾಯಂಕಾಲ 6.30 ಗಂಟೆ ಆಗಿರಬಹುದು.

**8.** ಮಾರನೇ ದಿನ ಮಹೇಂದ್ರ ನನಗೆ ತನ್ನ ಮೊಬೈಲ್ ನಲ್ಲಿದ್ದ ದರೋಡೆಯ ಪೋಟೋಗಳನ್ನು ತೋರಿಸಿದನು. ನಾನು ಆಗ ಪೋಟೋದಲ್ಲಿ ಮನ್ಸೂರ್ ಮತ್ತು ವಿಜಯ್ ಕಾಣಿಸುತ್ತಿದ್ದಾರೆ ಎಂದು ಹೇಳಿದಾಗ, ಮಹೇಂದ್ರ ಅವರಲ್ಲ ಬೇರೆಯವರಲ್ಲ ಎಂದು ನನಗೆ ಹೇಳಿದರು. ನಂತರ 2 ದಿನಗಳ ಬಳಿಕ ಮಹೇಂದ್ರನನ್ನು ಪೊಲೀಸರು ಕರೆದುಕೊಂಡು ಹೋದರು. ನಂತರ ಒಂದು ವಾರದ ಬಳಿಕ ನನ್ನನ್ನು ಪೊಲೀಸರು ಕರೆಯಿಸಿ ವಿಚಾರಣೆ ಮಾಡಿದರು. ಪೊಲೀಸರು ಮಹೇಂದ್ರನನ್ನು ದರೋಡೆಯಾದ ವಿಚಾರಕ್ಕೆ ಕರೆದುಕೊಂಡು ಹೋದರು. ನಂತರ ಆತ ವಾಪಸ್ಸು ಬರಲೇ ಇಲ್ಲ.

**9.** ವಿಜಯ್ ಸೇನ್, ಮನ್ಸೂರ್ ಮತ್ತು ಮಹೇಂದ್ರ ಚೌದರಿಯವರನ್ನು ನೋಡಿ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿದ್ದ 3 ನೇ ಆರೋಪಿ ಮನ್ಸೂರ್ ನನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರಿಂದಃ-</u>**

3 ನೇ ಆರೋಪಿತರ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**